ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರ.ಸಂ.	:	847
ಸದಸ್ಯರ ಹೆಸರು	:	ಶ್ರೀ ಎನ್. ಅಪ್ಪಾಜಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ	:	11-03-2020
ಉತ್ತರಿಸುವ ಸಚಿವರು	:	ಕಂದಾಯ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ಕೆಲವು ಜಮೀನುಗಳ ಪರಭಾರೆ ನಿಷೇಧ) ಕಾಯಿದೆ 1979ರಡಿಯಲ್ಲಿ ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರಡಿಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವ್ಯಕ್ತಿಗಳಿಗೆ ಮಂಜೂರಾದ ಜಮೀನುಗಳಿಗೆ ಅನ್ವಯಿಸುತ್ತದೆ ಎಂಬ ಅಂಶ ಸರ್ಕಾರದ ಗಮನದಲ್ಲಿದೆಯೇ;	ಹೌದು.
ಆ)	ಇಂತಹವರುಗಳಿಗೆ ಮಂಜೂರಾದ ಜಮೀನುಗಳ ಬಗ್ಗೆ ಕರ್ನಾಟಕ ಭೂ ಕಂದಾಯ 1964ರ ವಿಧಿ 95(2)ರ ಅಡಿಯಲ್ಲಿ ಭೂ ಪರಿವರ್ತನೆಗೆ ಒಬ್ಬ ವ್ಯಕ್ತಿಯು ಅರ್ಜಿಯನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವಾಗ ಪಿ.ಟಿ.ಸಿ.ಎಲ್. ಕಾಯ್ದೆ ಉಲ್ಲಂಘನೆಯಾಗಿದೆಯೇ ಎಂಬ ಬಗ್ಗೆ ಉಪ ವಿಭಾಗಾಧಿಕಾರಿಗಳ ಕಛೇರಿಯಿಂದ ಹಿಂಬರಹ ಪಡೆದು ಅರ್ಜಿಯೊಂದಿಗೆ ಲಗತ್ತಿಸಬೇಕಾಗಿದ್ದು, ಕರ್ನಾಟಕ ಭೂ ಮಂಜೂರಾತಿ ನಿಯಮಗಳು 1969ರ ಅಡಿಯಲ್ಲಿ ಭೂಮಿ ಮಂಜೂರಾಗದೇ ಪಿತ್ರಾರ್ಜಿತ ಅಥವಾ ಸ್ವಂತ ಜಮೀನುಗಳನ್ನು ಭೂ ಪರಿವರ್ತನೆ ಮಾಡಿಕೊಳ್ಳಲು ಅರ್ಜಿ ಸಲ್ಲಿಸುವಾಗ, ಜಿಲ್ಲಾಧಿಕಾರಿಗಳು ಇಂತಹ ಜಮೀನುಗಳಿಗೂ ಪಿ.ಟಿ.ಸಿ.ಎಲ್. ಕಾಯಿದೆಯಡಿ ಉಪವಿಭಾಗಾಧಿಕಾರಿಗಳಿಂದ ಹಿಂಬರಹ ಪಡೆದು ಲಗತ್ತಿಸಲು ನಿರ್ಬಂಧ ವಿಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 95(2) ರಡಿ ಕಲ್ಪಿಸಲಾದ ಅವಕಾಶದಂತೆ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗೆ ಬದಲಾಯಿಸಲು ಇರುವ ಭೂ ಪರಿವರ್ತನಾ ವಿಧಾನವನ್ನು ಸರಳೀಕರಣಗೊಳಿಸಿ, ಸಂಖ್ಯೆ: ಆರ್‌ಡಿ 67 ಎಲ್‌ಜಿಪಿ 2018, ದಿನಾಂಕ: 20/02/2019ರಂದು ಸರ್ಕಾರದ ಆದೇಶ ಹೊರಡಿಸಲಾಗಿದೆ. ಆದೇಶದ ಪ್ರತಿಯನ್ನು **ಅನುಬಂಧ-1ರಲ್ಲಿ** ಒದಗಿಸಲಾಗಿದೆ. ಆ ಪ್ರಕಾರ ಅರ್ಜಿದಾರರು ಭೂ ಪರಿವರ್ತನೆಗೆ ಸಲ್ಲಿಸಬೇಕಾದ ದಾಖಲೆಗಳು:- 1) ಚಾಲ್ತಿ ವರ್ಷದ ಪಹಣಿ ಪತ್ರಿಕೆ. 2) ಹಕ್ಕುಬದಲಾವಣೆ ದಾಖಲಾತಿ (ಮ್ಯುಟೇಷನ್ ಪ್ರತಿ). 3) 11-ಇ ನಕ್ಷೆ (ಒಂದು ಸರ್ವೆ ನಂಬರ್‌ನಲ್ಲಿ ಭಾಗಶಃ ಭೂಪರಿವರ್ತನೆಗೆ ವಿನಂತಿಸಿದ ಸಂದರ್ಭದಲ್ಲಿ ಮಾತ್ರ 11-ಇ ನಕ್ಷೆ) ಆಗಿರತಕ್ಕದ್ದು. 4) ಅರ್ಜಿದಾರರಿಂದ ಭೂ ಪರಿವರ್ತನೆ ಕೋರಿಕೆಯೊಂದಿಗೆ ಅಫಿಡವಿಟ್ ನಮೂನೆ-ಎ ರಲ್ಲಿ ಪಡೆಯತಕ್ಕದ್ದು.

		ನಮೂನೆ-ಎ ಪ್ರಮಾಣ ಪತ್ರ / ಘೋಷಣೆಯ ಕ್ರ.ಸಂ.09 (v) ರಲ್ಲಿ "ಷೆಡ್ಯೂಲ್ ನಲ್ಲಿ ನಮೂದಿಸಿರುವ ಜಮೀನು / ಜಮೀನುಗಳು ಸರ್ಕಾರದ ಪೂರ್ವಾನುಮತಿ ಇಲ್ಲದೇ ಪರಭಾರೆಗೆ ನಿಷೇಧಿಸಿರುವ ಕರ್ನಾಟಕ (ಪಿಟಿಸಿಎಲ್) ಕಾಯ್ದೆ, 1978ರ ವ್ಯಾಪ್ತಿಗೊಳಪಡುವುದಿಲ್ಲ" ಎಂದು ದಾಖಲೆಗಳ ಆಧಾರದ ಮೇಲೆ ಅರ್ಜಿದಾರರು ಪ್ರಮಾಣೀಕರಿಸತಕ್ಕದ್ದು. ಅಫಿಡೆವಿಟ್ (ನಮೂನೆ-ಎ) **ಅನುಬಂಧ-2**ರಲ್ಲಿ ಒದಗಿಸಲಾಗಿದೆ.
ಇ)	ಬಂದಿದ್ದಲ್ಲಿ, ಪಿತ್ರಾರ್ಜಿತ ಅಥವಾ ಸ್ವಂತ ಜಮೀನುಗಳಿಗೆ ಪಿ.ಟಿ.ಸಿ.ಎಲ್. ಹಿಂಬರಹ ಪಡೆದು ಲಗತ್ತಿಸಲು ನಿರ್ಭಂದವನ್ನು ನಿಲ್ಲಿಸಿ, ವಿನಾಯಿತಿ ನೀಡಲು ರಾಜ್ಯದ ಎಲ್ಲಾ ಜಿಲ್ಲಾಧಿಕಾರಿಗಳಿಗೆ ನಿರ್ದೇಶನವನ್ನು ನೀಡುವುದೇ? (ಸ್ಪಷ್ಟ ಉತ್ತರ ನೀಡುವುದು)	ಪಿತ್ರಾರ್ಜಿತ ಅಥವಾ ಸ್ವಂತ ಜಮೀನುಗಳನ್ನು ಭೂ ಪರಿವರ್ತನೆ ಮಾಡಿಕೊಳ್ಳಲು ಅರ್ಜಿ ಸಲ್ಲಿಸುವಾಗ, ಜಿಲ್ಲಾಧಿಕಾರಿಗಳು ಇಂತಹ ಜಮೀನುಗಳಿಗೂ ಪಿ.ಟಿ.ಸಿ.ಎಲ್. ಕಾಯಿದೆಯಡಿ ಉಪವಿಭಾಗಾಧಿಕಾರಿಗಳಿಂದ ಹಿಂಬರಹ ಪಡೆದು ಲಗತ್ತಿಸಬೇಕೆಂಬ ನಿರ್ಬಂಧವನ್ನು ವಿಧಿಸಿಲ್ಲವಾದ್ದರಿಂದ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡುವ ಪ್ರಮೇಯವೇ ಉದ್ಭವಿಸುವುದಿಲ್ಲ.

ಸಂಖ್ಯೆ: ಆರ್ ಡಿ 31 ಎಲ್ ಜಿಕ್ಯೂ 2020

(ಆರ್. ಅಶೋಕ)

ಕಂದಾಯ ಸಚಿವರು

ಅನುಬಂಧ-1

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಗಳಿಗಾಗಿ ಭೂ ಪರಿವರ್ತಿಸುವ ವಿಧಾನವನ್ನು ಸರಳೀಕರಣಗೊಳಿಸುವ ಕುರಿತು.

ಓದಲಾಗಿದೆ:- 1. ಸರ್ಕಾರದ ಸುತ್ತೋಲೆ ಸಂಖ್ಯೆಡಿ: ಆರ್‌ಡಿ 56 ಎಲ್‌ಜಿಪಿ 2008 ದಿನಾಂಕ: 17-10-2008.

3. ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 12 ಎಲ್‌ಜಿಪಿ 2018 ದಿನಾಂಕ: 02-02-2018.

* * *

ಪ್ರಸ್ತಾವನೆ:

ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 95(2) ರಡಿಯಲ್ಲಿ ಕೃಷಿ ಉದ್ದೇಶಕ್ಕಾಗಿ ಹೊಂದಿರುವ ಭೂಮಿಯ ಅಧಿಭೋಗದಾರನು ಅಂತಹ ಜಮೀನನ್ನು ಅಥವಾ ಅದರ ಯಾವುದೇ ಭಾಗವನ್ನು ಕೃಷಿಯೇತರ ಉದ್ದೇಶಕ್ಕಾಗಿ ಪರಿವರ್ತಿಸಲು ಇಚ್ಛಿಸಿದರೆ ಜಿಲ್ಲಾಧಿಕಾರಿಯವರಿಗೆ ಅರ್ಜಿ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಸರ್ಕಾರದ ಸುತ್ತೋಲೆ ದಿನಾಂಕ: 17-10-2008 ರನ್ವಯ ಕರ್ನಾಟಕ ಪಟ್ಟಣ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 (ಕೆಟಿಪಿಪಿ) ಅನ್ವಯ ಕೃಷಿ ಜಮೀನನ್ನು ಭೂ ಪರಿವರ್ತಿಸಲಾದ ಯಾವುದೇ ಕಾನೂನಿನ ಉಪಬಂಧಗಳನ್ನು ಉಲ್ಲಂಘಿಸುತ್ತಿಲ್ಲವೆಂಬುದನ್ನು ಹಾಗೂ ಭೂ ಉಪಯೋಗ ಬದಲಾವಣೆಗೆ ಸಂಬಂಧಿಸಿದ ಓಡಿಪಿ ಮತ್ತು ಸಿಡಿಪಿ ಅನ್ವಯ ಇದೆಯೇ ಎನ್ನುವ ಕುರಿತು ದೃಢೀಕರಿಸಿಕೊಳ್ಳುವ ಸಲುವಾಗಿ ಬಿಡಿಎ/ ಬಿಎಂಆರ್‌ಡಿಎ / ಸ್ಥಳೀಯ ಯೋಜನಾ ಪ್ರಾಧಿಕಾರಗಳ ಎನ್‌ಓಸಿಯನ್ನು ಪಡೆದ ನಂತರವೇ ಭೂ ಪರಿವರ್ತನೆ ಆದೇಶ ನೀಡಲು ಕ್ರಮವಹಿಸಲಾಗುತ್ತಿದೆ.

ಮುಂದುವರೆದು, ಅರ್ಜಿದಾರರು ಭೂ ಪರಿವರ್ತನೆಗೆ ಕೋರಿರುವ ಜಮೀನು ಪಿ.ಟಿ.ಸಿ.ಎಲ್. ಕಾಯ್ದೆಗೆ ಒಳಪಟ್ಟಿಲ್ಲವೆಂದು, ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 79ಎ ಮತ್ತು 79ಬಿ ಒಳಪಟ್ಟಿಲ್ಲವೆಂದು, ಭೂ ಸ್ವಾಧೀನತೆಗೆ ಒಳಪಟ್ಟಿಲ್ಲ ಎಂಬ ಬಗ್ಗೆ ಹಾಗೂ ಇತರ ಕೆಲವು ನಿರಾಕ್ಷೇಪಣಾ ಪತ್ರಗಳನ್ನು ವಿವಿಧ ಪ್ರಾಧಿಕಾರದಿಂದ ಮುಂಚಿತವಾಗಿ ಪಡೆದು ಭೂ ಪರಿವರ್ತನೆಗೆ ಅರ್ಜಿಯೊಂದಿಗೆ ಸಲ್ಲಿಸಬೇಕಾಗಿದ್ದು, ಅರ್ಜಿದಾರರಿಗೆ ಸಾಕಷ್ಟು ಸಮಯ ಮತ್ತು ಹಣದ ಹೊರೆಯಾಗುತ್ತಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಸರ್ಕಾರದ ಆದೇಶ ದಿನಾಂಕ: 02-02-2018ರಲ್ಲಿ ದಿನಾಂಕ:01/03/2018ರಿಂದ ಭೂ ಪರಿವರ್ತನಾ ಕೋರಿಕೆಗಳನ್ನು ಭೂ ಪರಿವರ್ತನಾ ತಂತ್ರಾಂಶದ ಮುಖಾಂತರವೇ ನಿರ್ವಹಿಸತಕ್ಕದೆಂದು ಹಾಗೂ ಭೂ ಪರಿವರ್ತನೆಯ ಕೋರಿಕೆಗಳ ಆದೇಶ / ನಿರ್ಧಾರಗಳನ್ನು ಜಿಲ್ಲಾಧಿಕಾರಿಗಳ ಡಿಜಿಟಲ್ ಸಹಿ ಕಾರ್ಡಿನ ಮೂಲಕವೇ ಹೊರಡಿಸತಕ್ಕದೆಂದು ತಿಳಿಸಲಾಗಿದೆ.

ಮುಂದುವರೆದು, ಈ ವಿಷಯದಲ್ಲಿ ಆಗಾಗ್ಗೆ ಸರ್ಕಾರದಿಂದ ಸುತ್ತೋಲೆಗಳ ಮೂಲಕ ಕಾಲಕಾಲಕ್ಕೆ ಹಲವು ನಿರ್ದೇಶನಗಳನ್ನು ನೀಡಲಾಗಿದೆ. ಕೈಗಾರಿಕೋದ್ಯಮ ಹಾಗೂ ಸೌರ ವಿದ್ಯುತ್ ಮುಂತಾದ ಯೋಜನೆಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961ರ ಕಲಂ 109ಗೆ ತಿದ್ದುಪಡಿ ತರಲಾಗಿದ್ದು, ಭೂ ಪರಿವರ್ತನೆಯ ವಿಧಾನವನ್ನು ಸಾಕಷ್ಟು ಸರಳೀಕರಣಗೊಳಿಸಲಾಗಿದೆ. ಪ್ರವಾಸೋದ್ಯಮ, ವಸತಿ ಸೌಕರ್ಯ ಮುಂತಾದ ಮೂಲಸೌಕರ್ಯ ಅಭಿವೃದ್ಧಿ ದೃಷ್ಟಿಯಿಂದ ಭೂ ಪರಿವರ್ತನಾ ಪ್ರಕ್ರಿಯೆಯನ್ನು ಮತ್ತಷ್ಟು ಸರಳೀಕರಿಸುವುದು ಅವಶ್ಯವಾಗಿರುತ್ತದೆ.

ಕೃಷಿಯೇತರ ಉದ್ದೇಶಗಳಿಗಾಗಿ ಭೂ ಪರಿವರ್ತನೆಯ ಕೋರಿಕೆಗಳನ್ನು ಆನ್‌ಲೈನ್ ಮುಖಾಂತರ ಪಡೆದು ಹಾಗೂ ತಂತ್ರಾಂಶದ ಮೂಲಕ ನಿರ್ವಹಿಸಲು ಕ್ರಮವಹಿಸಲಾಗಿದೆ. ತಂತ್ರಾಂಶದ ಮೂಲಕ ಭೂ ಪರಿವರ್ತನೆಯ ಕೋರಿಕೆಗಳನ್ನು ನಿರ್ವಹಿಸಲು ಸೌಲಭ್ಯಗಳನ್ನು ಕಲ್ಪಿಸಲಾಗಿದ್ದರೂ ಸಹ ಬಹುತೇಕ ಜಿಲ್ಲೆಗಳಲ್ಲಿ ಇನ್ನೂ ಮ್ಯಾನ್ಯುಯಲ್ ವಿಧಾನದಲ್ಲಿಯೇ ಅರ್ಜಿ ಸಲ್ಲಿಸುತ್ತಿರುವುದನ್ನು ಗಮನಿಸಿದ್ದು, ಈ ಪ್ರಕ್ರಿಯೆಯಲ್ಲಿನ ಸಂಭಾವ್ಯ ವಿಳಂಬವನ್ನು ತಪ್ಪಿಸಿ, ಮತ್ತಷ್ಟು ಪಾರದರ್ಶಕತೆಯನ್ನು ತರುವ ದೃಷ್ಟಿಯಿಂದ ಕಾಲಮಿತಿಯೊಳಗೆ ಭೂ ಪರಿವರ್ತನೆ ಆದೇಶ ನೀಡುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಈ ಪ್ರಕ್ರಿಯೆಯನ್ನು ಇನ್ನಷ್ಟು ಸರಳಗೊಳಿಸುವುದು ಅವಶ್ಯವಾಗಿರುತ್ತದೆಂದು ಪ್ರಸ್ತಾಪಿಸಲಾಗಿದೆ.

----2

ಭೂ ಪರಿವರ್ತನ ಪ್ರಕ್ರಿಯೆ ಸರಳೀಕರಣ ಕುರಿತಂತೆ ಮೊದಲ ಹಂತದಲ್ಲಿ ಅರ್ಜಿದಾರರು ನಾಡ ಕಛೇರಿ ತಾಲ್ಲೂಕು ಕಛೇರಿ, ಜಿಲ್ಲಾಧಿಕಾರಿ ಕಛೇರಿಯಲ್ಲಿ ಆನ್‌ಲೈನ್ ಮೂಲಕ ಜಿಲ್ಲಾಧಿಕಾರಿಗಳಿಗೆ ಯಾವುದೇ ನಿರಾಕ್ಷೇಪಣಾ ಪತ್ರಗಳಿಲ್ಲದೆ ಅರ್ಜಿದಾರರು ಪ್ರಮಾಣ ಪತ್ರ ಮತ್ತು ಕನಿಷ್ಠ ದಾಖಲೆಗಳೊಂದಿಗೆ ಅರ್ಜಿ ಸಲ್ಲಿಸಿದ ಕೂಡಲೇ ಇತರ ಇಲಾಖೆಗಳ, ಪ್ರಾಧಿಕಾರಿಗಳ ಅಭಿಪ್ರಾಯಕ್ಕಾಗಿ ಅರ್ಜಿಯನ್ನು ಆನ್‌ಲೈನ್ ಮೂಲಕ ಏಕಕಾಲಕ್ಕೆ ಕಳುಹಿಸುವ ಬಗ್ಗೆ ಪ್ರಸ್ತಾಪಿಸಲಾಗಿದೆ. ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಏಕಕಾಲಕ್ಕೆ ಕಳುಹಿಸಿರುವುದರಿಂದ ಅರ್ಜಿದಾರರು ವಿವಿಧ ಇಲಾಖೆಗಳಿಗೆ ಮತ್ತು ಕಛೇರಿಗಳಿಗೆ ಅಲೆದಾಡುವುದನ್ನು ತಪ್ಪಿಸುವುದು ಇದರ ಉದ್ದೇಶವಾಗಿದೆ. ಅರ್ಜಿದಾರರು ಸಲ್ಲಿಸಬೇಕಾದ ಕನಿಷ್ಠ ದಾಖಲೆಗಳು ಅಂದರೆ: (1) ಚಾಲ್ತಿ ವರ್ಷದ ಪಹಣಿ ಪತ್ರಿಕೆ (2) ಹಕ್ಕು ಬದಲಾವಣೆ ದಾಖಲಾತಿ (ಮ್ಯುಟೇಷನ್ ಪ್ರತಿ) (3) 11-ಇ ನಕ್ಷೆ (ಒಂದು ಸರ್ವೆ ನಂಬರಿನಲ್ಲಿ ಭಾಗಶಃ ಭೂ ಪರಿವರ್ತನೆಗೆ ವಿನಂತಿಸಿದ ಸಂದರ್ಭದಲ್ಲಿ ಮಾತ್ರ 11-ಇ ನಕ್ಷೆಯನ್ನು ಹಾಜರುಪಡಿಸಬೇಕು) (4) ಅಫಿಡವಿಟ್ – ಇವುಗಳನ್ನು ಸಲ್ಲಿಸಬೇಕಾಗುತ್ತದೆ.

ಮುಂದುವರೆದು, ಭೂ ಪರಿವರ್ತನೆಗೆ ಕೋರಿಕೆಗಳನ್ನು ಅಭಿಪ್ರಾಯಕ್ಕಾಗಿ ಆನ್‌ಲೈನ್ ಮುಖಾಂತರ ಬೇರೆ ಇಲಾಖೆಗಳಿಗೆ, ಪ್ರಾಧಿಕಾರಿಗಳಿಗೆ ಕಳುಹಿಸಿದ ನಂತರ ನಿಗದಿಪಡಿಸಿದ ಒಂದು ತಿಂಗಳ ಅವಧಿಯೊಳಗೆ ಅವರಿಂದ ಅಭಿಪ್ರಾಯ / ವರದಿ ಬಾರದಿದ್ದ ಪಕ್ಷದಲ್ಲಿ, ಭೂ ಪರಿವರ್ತನೆ ಕೋರಿಕೆಗೆ ಅವರಿಂದ ಯಾವುದೇ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ, ಕೋರಿಕೆಗಳ ಬಗ್ಗೆ ನಿಯಮಾನುಸಾರ ಮುಂದಿನ ಕ್ರಮವಹಿಸಲು ಅವಕಾಶ ಕಲ್ಪಿಸಲು ಉದ್ದೇಶಿಸಲಾಗಿದೆ.

ಈ ಹಿನ್ನೆಲೆಯಲ್ಲಿ ಅರ್ಜಿದಾರರು ಆನ್‌ಲೈನ್ ಮುಖಾಂತರ ಭೂ ಪರಿವರ್ತನೆಗೆ ಜಿಲ್ಲಾಧಿಕಾರಿಗಳಿಗೆ ಅರ್ಜಿ ಸಲ್ಲಿಸಿದ ತಕ್ಷಣ ಸಂಬಂಧಪಟ್ಟ ಇಲಾಖೆ/ಪ್ರಾಧಿಕಾರಿಗಳಿಗೆ ಅವರ ಅಭಿಪ್ರಾಯಕ್ಕಾಗಿ ಅರ್ಜಿಯನ್ನು ಏಕಕಾಲಕ್ಕೆ ಆನ್‌ಲೈನ್ ಮುಖಾಂತರ ಕಳುಹಿಸಿ, ನಿಗದಿತ ಕಾಲಮಿತಿಯೊಳಗೆ ಅವರಿಂದ ಆನ್‌ಲೈನ್ ಮುಖಾಂತರವೇ ಅಭಿಪ್ರಾಯ / ವರದಿ ಪಡೆದು ಭೂ ಪರಿವರ್ತನೆಗೆ ಕ್ರಮವಹಿಸುವುದರ ಮುಖಾಂತರ ಅರ್ಜಿದಾರರು ಪ್ರಸ್ತುತ ಎದುರಿಸುತ್ತಿರುವ ತೊಂದರೆಗಳನ್ನು ನಿವಾರಿಸಲು ಹಾಗೂ ಕಛೇರಿಗಳಿಗೆ ಅನಗತ್ಯವಾಗಿ ಅಲೆದಾಡುವುದನ್ನು ತಪ್ಪಿಸಲು ಭೂ ಪರಿವರ್ತನ ವಿಧಾನವನ್ನು ಸರಳೀಕರಿಸಲು ಪ್ರಸ್ತಾಪಿಸಲಾಗಿದೆ.

ಅದರಂತೆ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 67 ಎಲ್‌ಜಿಪಿ 2018,
ಬೆಂಗಳೂರು ದಿನಾಂಕ: 20-02-2019.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 95(2)ರಡಿ ಕಲ್ಪಿಸಲಾದ ಅವಕಾಶದಂತೆ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಬದಲಾಯಿಸಲು ಇರುವ ಭೂಪರಿವರ್ತನಾ ವಿಧಾನವನ್ನು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರಳೀಕರಣಗೊಳಿಸಿ ಅನುಷ್ಠಾನಗೊಳಿಸಲು ಸರ್ಕಾರವು ಆದೇಶಿಸಿದೆ.

(1) ಅರ್ಜಿದಾರರು ಭೂಪರಿವರ್ತನೆಗೆ ತಾಲ್ಲೂಕು ಕಛೇರಿ, ಜಿಲ್ಲಾಧಿಕಾರಿಯವರ ಕಛೇರಿಯಲ್ಲಿ Online ಮುಖಾಂತರ ಅಥವಾ ಅರ್ಜಿದಾರನು Onlineನಲ್ಲಿ landrecords.karnataka.gov.in - website ನ Citizen login for Revenue Services link ನಲ್ಲಿನ Affidavit Based conversion module ನಲ್ಲಿ login ಆಗುವ ಮುಖಾಂತರ create account ನಲ್ಲಿ login ID ಅನ್ನು create ಮಾಡಿ ಜಿಲ್ಲಾಧಿಕಾರಿಯವರಿಗೆ ಅರ್ಜಿ ಸಲ್ಲಿಸುವುದು.

(2) ಅರ್ಜಿದಾರರು ಭೂಪರಿವರ್ತನೆಗೆ ಸಲ್ಲಿಸಬೇಕಾದ ದಾಖಲೆಗಳು (1) ಚಾಲ್ತಿ ವರ್ಷದ ಪಹಣಿ ಪತ್ರಿಕೆ (2) ಹಕ್ಕು ಬದಲಾವಣೆ ದಾಖಲಾತಿ (ಮ್ಯೂಟೇಷನ್ ಪ್ರತಿ) (3) 11-ಇ ನಕ್ಷೆ (ಒಂದು ಸರ್ವೆ ನಂಬರಿನಲ್ಲಿ ಭಾಗಶಃ ಭೂ ಪರಿವರ್ತನೆಗೆ ವಿನಂತಿಸಿದ ಸಂದರ್ಭದಲ್ಲಿ ಮಾತ್ರ 11-ಇ ನಕ್ಷೆ) ಆಗಿರತಕ್ಕದ್ದು.

----3

(3) ಅರ್ಜಿದಾರರಿಂದ ಭೂ ಪರಿವರ್ತನೆ ಕೋರಿಕೆಯೊಂದಿಗೆ ಅಫಿಡವಿಟ್ ನಮೂನೆ-ಎ ನಲ್ಲಿ (<u>ಅನುಬಂಧ</u>) ಪಡೆಯತಕ್ಕದ್ದು. ಈ ಅಫಿಡವಿಟ್ ರೂ.200/-ರ ಮೌಲ್ಯದಲ್ಲಿರಬೇಕು.

(4) ಕ್ರ.ಸಂ. (1)ರಲ್ಲಿ ತಿಳಿಸಿರುವಂತೆ landrecords.karnataka.gov.in - website ನಲ್ಲಿ login ಆಗುವ ಮೂಖಾಂತರ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಅರ್ಜಿದಾರರು ಅಪ್‌ಲೋಡ್ ಮಾಡಿದ ನೋಟರಿಯವರಿಂದ ಪ್ರಮಾಣೀಕರಿಸಿದ ಅಫಿಡವಿಟ್‌ನ ಮೂಲ ಪ್ರತಿಯನ್ನು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ 7 ದಿನಗಳೊಳಗಾಗಿ ಜಿಲ್ಲಾಧಿಕಾರಿ/ತಹಶೀಲ್ದಾರ್ ಕಚೇರಿಯ ಅರ್ಜಿ ಸ್ವೀಕೃತಿ ಕೇಂದ್ರದಲ್ಲಿ ಭೂ ಪರಿವರ್ತನೆ ಕೋರಿಕೆ ಸಂಖ್ಯೆಯ ಮಾಹಿತಿಯೊಂದಿಗೆ ಹಸ್ತಾಂತರಿಸಿ, ಅದಕ್ಕೆ ಸ್ವೀಕೃತಿ ಪಡೆದು, ಸ್ವೀಕೃತಿಯನ್ನು ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಬೇಕು.

(5) ಕ್ರ.ಸಂ. (4) ರಲ್ಲಿ ತಿಳಿಸಿರುವಂತೆ ತಹಶೀಲ್ದಾರ್ ಕಚೇರಿಯ ಅರ್ಜಿ ಸ್ವೀಕೃತ ಕೇಂದ್ರದಲ್ಲಿ ಸ್ವೀಕೃತವಾದ ಅಫಿಡವಿಟ್‌ನ ಮೂಲ ಪ್ರತಿಯನ್ನು ಸ್ವೀಕರಿಸಿದ 48 ಗಂಟೆಯೊಳಗಾಗಿ ಜಿಲ್ಲಾಧಿಕಾರಿ ಕಚೇರಿಗೆ ಹಸ್ತಾಂತರಿಸುವುದು.

(6) ಅರ್ಜಿದಾರರಿಂದ ಆನ್‌ಲೈನ್‌ನಲ್ಲಿ ಸ್ವೀಕೃತವಾದ ಭೂ ಪರಿವರ್ತನೆ ಕೋರಿಕೆ (ದಾಖಲೆಗಳು ಮತ್ತು ಅಫಿಡವಿಟ್ ನಮೂನೆ-ಎ ರೊಂದಿಗೆ) ಇಲಾಖೆ/ಪ್ರಾಧಿಕಾರಗಳಿಗೆ ಅವರ ಅಭಿಪ್ರಾಯಕ್ಕಾಗಿ ಏಕಕಾಲಕ್ಕೆ ತಪ್ಪದೇ ಆನ್‌ಲೈನ್‌ನಲ್ಲಿ ವರ್ಗಾಯಿಸತಕ್ಕದು.

(7) ವರ್ಗಾಯಿಸಲ್ಪಟ್ಟ ಇಲಾಖೆ/ಪ್ರಾಧಿಕಾರಗಳಿಂದ ಒಂದು ತಿಂಗಳ ಕಾಲಮಿತಿಯೊಳಗೆ ಅಭಿಪ್ರಾಯ/ವರದಿ ಬಾರದಿದ್ದಲ್ಲಿ ಭೂ ಪರಿವರ್ತನೆ ಕೋರಿಕೆ ಬಗ್ಗೆ ಅವರಿಂದ ಯಾವುದೇ ರೀತಿಯ ಆಕ್ಷೇಪಣೆ ಇಲ್ಲವೆಂದು ಪರಿಗಣಿಸಿ. ಕೂಡಲೇ ಭೂ ಪರಿವರ್ತನೆಗೆ ಮುಂದಿನ ಕ್ರಮ ವಹಿಸತಕ್ಕದ್ದು. ನಿಗದಿತ ಅವಧಿಯೊಳಗೆ ಅಭಿಪ್ರಾಯ/ವರದಿ ನೀಡಲು ತಪ್ಪಿದ್ದಲ್ಲಿ ಸಂಬಂಧಪಟ್ಟ ಅಧಿಕಾರಿಗಳೇ ಹೊಣೆಗಾರರಾಗಿರುತ್ತಾರೆ.

(8) ಭೂ ಪರಿವರ್ತನೆಗಾಗಿ ಆನ್‌ಲೈನ್ ಮೂಲಕ ಅರ್ಜಿ ಸ್ವೀಕರಿಸಿದ ದಿನಾಂಕದಿಂದ ಮುಂದಿನ 60 (ಅರವತ್ತು) ದಿನಗಳೊಳಗಾಗಿ ಭೂ ಪರಿವರ್ತನಾ ಆದೇಶ / ಹಿಂಬರಹವನ್ನು ಹೊರಡಿಸತಕ್ಕದ್ದು.

ಈ ವಿಷಯದ ಸಮ ಸಂಖ್ಯೆಯ ದಿನಾಂಕ: 18.02.2019ರಂದು ಹೊರಡಿಸಲಾದ ಆದೇಶವನ್ನು ಹಿಂಪಡೆಯಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

20.2.19

(ಎಸ್.ಎಲ್.ಮಹಾಂತೇಗೌಡ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂಮಂಜೂರಾತಿ-1)

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ವಿಕಾಸಸೌಧ ಘಟಕ, ವಿಕಾಸಸೌಧ, ಬೆಂಗಳೂರು (ಇದನ್ನು ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 50 ಪ್ರತಿಗಳನ್ನು ಒದಗಿಸುವಂತೆ ಕೋರಿದೆ)

<u>ಇವರಿಗೆ,</u>

1. ಮಹಾಲೇಖಪಾಲರು (ಎ ಮತ್ತು ಇ. ಲೆಕ್ಕಪರಿಶೋಧನೆ-1 ಮತ್ತು 2) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ. ವಿಕಾಸ ಸೌಧ, ಬೆಂಗಳೂರು

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು

2. ಸರ್ಕಾರದ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು
3. ಆಯುಕ್ತರು, ಭೂ ಮಾಪನ ಮತ್ತು ಭೂ ದಾಖಲೆಗಳ ಇಲಾಖೆ, ಕೆ.ಆರ್.ವೃತ್ತ, ಬೆಂಗಳೂರು
4. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು
5. ಎಲ್ಲಾ ಜಿಲ್ಲಾಧಿಕಾರಿಗಳು
6. ನಿರ್ದೇಶಕರು, ಅಟಲ್ ಜನಸ್ನೇಹಿ ಕೇಂದ್ರ, ಕೆ.ಆರ್.ವೃತ್ತ, ಬೆಂಗಳೂರು
7. ನಿರ್ದೇಶಕರು, ನಗರ ಯೋಜನಾ ನಿರ್ದೇಶನಾಲಯ, ಬಹುಮಹಡಿಗಳ ಕಟ್ಟಡ, ಬೆಂಗಳೂರು
8. ಸರ್ಕಾರದ ಅಪರ ಕಾರ್ಯದರ್ಶಿ(ಅಂರಾಜವಿ), ಕಾನೂನು ಇಲಾಖೆ, ವಿಧಾನಸೌಧ, ಬೆಂಗಳೂರು
9. ಸರ್ಕಾರದ ಉಪ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ಸಿ.ಆ.ಸು.ಇ. (ಸಚಿವ ಸಂಪುಟ ವಿಷಯ ಸಂಖ್ಯೆ, 733/2018) ವಿಧಾನಸೌಧ, ಬೆಂಗಳೂರು
10. ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ (ಸಮನ್ವಯ), ಬಹುಮಹಡಿ ಕಟ್ಟಡ, ಬೆಂಗಳೂರು (ಕಾಂಪೆಂಡಿಯಮ್‌ಗಾಗಿ).
11. ರಾಜ್ಯದ ಎಲ್ಲಾ ಉಪ ವಿಭಾಗಾಧಿಕಾರಿಗಳು } (ಜಿಲ್ಲಾಧಿಕಾರಿಗಳ ಮುಖಾಂತರ)
12. ರಾಜ್ಯದ ಎಲ್ಲಾ ತಾಲೂಕಿನ ತಹಶೀಲ್ದಾರ್‌ಗಳು }
13. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-7), ವಿಧಾನಸೌಧ, ಬೆಂಗಳೂರು
14. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು

<u>ಪ್ರತಿಯನ್ನು ಮಾಹಿತಿಗಾಗಿ:</u>

(1) ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು
(2) ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು
(3) ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕ, ಕಂದಾಯ ಇಲಾಖೆ (ಭೂ ಮಂಜೂರಾತಿ) ಬಹುಮಹಡಿ ಕಟ್ಟಡ, ಬೆಂಗಳೂರು.

ಅನುಬಂಧ-II

ನಮೂನೆ-ಎ

ಪ್ರಮಾಣ ಪತ್ರ/ಘೋಷಣೆ

ಈ ಘೋಷಣೆಯನ್ನು .... ಇಸವಿಯ .... ಮಾಹೆಯ .... ದಿನದಂದು ಪ್ರಮಾಣೀಕರಿಸಲಾಗಿದೆ.

01.	ಘೋಷಣೆ ಮಾಡುವವರ ಹೆಸರು	
02.	ಘೋಷಣೆ ಮಾಡುವವರ ತಂದೆ/ತಾಯಿ/ಗಂಡನ ಹೆಸರು	
03.	ವಯಸ್ಸು/ಜನ್ಮ ದಿನಾಂಕ	
04.	ವಿಳಾಸ	
05.	ಭಾವಚಿತ್ರವನ್ನೊಳಗೊಂಡ ಗುರುತಿನ ಚೀಟಿ (ವಿವರ ಮತ್ತು ಸಂಖ್ಯೆ)	

06. ಪ್ರಮಾಣ ಪತ್ರದ ಉದ್ದೇಶ ಮತ್ತು ವಿವರ.

ಶ್ರೀ .... ಆದ ನಾನು ಮೇಲ್ಕಂಡ ವಿಳಾಸದಲ್ಲಿ ಹಿಂದಿನ.................. ವರ್ಷಗಳಿಂದ ವಾಸಿಸುತ್ತಿದ್ದು, ಈ ಮುಂದಿನಂತೆ ಘೋಷಣೆ ಮಾಡುತ್ತೇನೆ. ನಾನು ಈ ಕೆಳಗೆ ನಮೂದಿಸಿರುವಂತೆ ಕೃಷಿ ಜಮೀನನ್ನು ಹೊಂದಿದ್ದು, ಸದರಿ ಜಮೀನನ್ನು ಕೃಷಿಯೇತರ (ಅಂದರೆ ವಾಸ/ಕೈಗಾರಿಕೆ/........................) ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡಲು ಇಚ್ಛಿಸಿದ್ದು, ಜಿಲ್ಲಾಧಿಕಾರಿಯವರಿಗೆ ಅರ್ಜಿ ಸಲ್ಲಿಸಿರುತ್ತೇನೆ. ವಿವರಗಳು ಈ ಕೆಳಕಂಡಂತಿವೆ:

07. ಆಸ್ತಿಯ ಶೆಡ್ಯೂಲ್ ವಿವರ

ಜಿಲ್ಲೆ	ತಾಲ್ಲೂಕು	ಹೋಬಳಿ	ಗ್ರಾಮ	ಸರ್ವೆ ನಂಬರ್		ಹಿಸ್ಸಾ ಸಂಖ್ಯೆ

ಜಮೀನಿನ ವಿಸ್ತೀರ್ಣ				ಜಮೀನಿನ ವಿಧ (ಒಣ/ಖುಷ್ಕಿ/ಬಾಗಾಯ್ತು)	ಆಕಾರ್‌ಬಂದ್ ಮತ್ತು ಆರ್‌ಟಿಸಿ ಪ್ರತಿ ಲಗತ್ತಿಸಿದೆಯೇ?
ಒಟ್ಟು	ಖರಾಬು(ಎ)	ಖರಾಬು(ಬಿ)	ನಿವ್ವಳ		

ಚೆಕ್ಕುಬಂದಿ	ಉತ್ತರ	ದಕ್ಷಿಣ	ಪೂರ್ವ	ಪಶ್ಚಿಮ		

08. ಮೇಲ್ಕಂಡ ಜಮೀನಿನ ಹಕ್ಕನ್ನು ಈ ಕೆಳಕಂಡಂತೆ ಪಡೆದಿರುತ್ತೇನೆ.

ಮ್ಯುಟೇಷನ್ ಸಂಖ್ಯೆ	ವರ್ಷ	ಹಕ್ಕು ಪಡೆದಿರುವ ವಿಧಾನ

09. ಘೋಷಣೆ:

ನಾನು ದಾಖಲೆಗಳ ಆಧಾರದ ಮೇಲೆ ಈ ಕೆಳಕಂಡಂತೆ ಪ್ರಮಾಣೀಕರಿಸುತ್ತೇನೆ.

I. ಶೆಡ್ಯೂಲ್ ಜಮೀನನ್ನು ಭೂ ಪರಿವರ್ತನೆ ಮಾಡಲು ಭೂ ಮಂಜೂರಾತಿ/ಸಕ್ರಮೀಕರಣ/ದೃಢೀಕರಣ/ರೆಸ್ಟೋರೇಷನ್ ನಿಯಮಗಳಡಿ ಯಾವುದೇ ನಿರ್ಬಂಧಗಳಿರುವುದಿಲ್ಲ.

II. ಶೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು/ಜಮೀನುಗಳು ಕರ್ನಾಟಕ ಭೂ ಸುಧಾರಣಾ ಕಾಯಿದೆ, 1961ರ ಅಧಿನಿಯಮಗಳಡಿ ಗೇಣಿ ಜಮೀನಾಗಿರುವುದಿಲ್ಲ ಮತ್ತು ಗೇಣಿ ಕುರಿತಾಗಿ ಯಾವುದೇ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಪ್ರಕರಣ ಬಾಕಿ ಇರುವುದಿಲ್ಲ.

III. ಶೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು/ಜಮೀನುಗಳು ಇನಾಂ ರದ್ದಿಯಾತಿ ಕಾಯ್ದೆ 1959 ಅಥವಾ ಸರ್ಕಾರಕ್ಕೊಳಪಡುವ ಇನ್ನಾವುದೇ ಇನಾಂ ಗಳ ವ್ಯಾಪ್ತಿಗೊಳಪಡುವುದಿಲ್ಲ, ಆದರೆ ಮರು ಮಂಜೂರಾತಿಯಾಗಿದೆ.

IV. ಶೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು/ಜಮೀನುಗಳು ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ನಿಯಮ 71ಎ-ಬಿ ರಡಿ ಉಲ್ಲಂಘನೆ ಅಥವಾ ಶಂಕಿತ ಉಲ್ಲಂಘನೆಗೆ ಒಳಪಟ್ಟಿರುವುದಿಲ್ಲ.

V. ಶೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು/ಜಮೀನುಗಳು ಸರ್ಕಾರದ ಪೂರ್ವಾನುಮತಿ ಇಲ್ಲದೇ ಪರಭಾರೆಗೆ ನಿಷೇಧಿಸಿರುವ ಕರ್ನಾಟಕ (ಪಿಟಿಸಿಎಲ್) ಕಾಯ್ದೆ, 1978ರ ವ್ಯಾಪ್ತಿಗೊಳಪಡುವುದಿಲ್ಲ.

VI. ಶೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು/ಜಮೀನುಗಳ ಮಾಲೀಕತ್ವಕ್ಕೆ ಸಂಬಂಧಿಸಿದಂತೆ ಯಾವುದೇ ಕಂದಾಯ ಮತ್ತು ಸಿವಿಲ್ ನ್ಯಾಯಾಲಯ ಹಾಗೂ ನ್ಯಾಯಾಧಿಕಾರಿಗಳಲ್ಲಿ ಬಾಕಿ ಇರುವುದಿಲ್ಲ, ತಡೆಯಾಜ್ಞೆ ಇರುವುದಿಲ್ಲ ಮತ್ತು ಯಥಾಸ್ಥಿತಿ ಕಾಪಾಡುವಂತೆ ಆದೇಶವಾಗಿರುವುದಿಲ್ಲ.

VII. ಶೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು/ಜಮೀನುಗಳನ್ನು ಯಾವುದೇ ಉದ್ದೇಶಕ್ಕಾಗಿ ಭೂಸ್ವಾಧೀನಕ್ಕೆ ಒಳಪಟ್ಟಿರುವುದಾಗಲೀ ಅಥವಾ ಭೂಸ್ವಾಧೀನ ಮಾಡಿಕೊಳ್ಳಲಾಗುವುದೆಂಬ ಯಾವುದೇ ಮಾಹಿತಿ ಸ್ವೀಕೃತವಾಗಿರುವುದಿಲ್ಲ.

VIII	ಶೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು/ಜಮೀನುಗಳು ಅರಣ್ಯ ಜಮೀನಾಗಿರುವುದಿಲ್ಲ
IX	ಶೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು/ಜಮೀನುಗಳು ಕರ್ನಾಟಕ ವಿಲೇಜ್ ಆಫೀಸರ್ ಅಬಾಲಿಷನ್ ಅಧಿನಿಯಮ 1961ರ ನಿಯಮಗಳ ವ್ಯಾಪ್ತಿಗೊಳಪಟ್ಟಿರುವುದಿಲ್ಲ
X	ಶೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು/ಜಮೀನುಗಳಲ್ಲಿ ಫಾರ್ಮ್ ಹೌಸ್ ಹೊರತುಪಡಿಸಿ ಇನ್ನಾವುದೇ ತರಹದ ಕಟ್ಟಡಗಳಿರುವುದಿಲ್ಲ
XI	ಶೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು/ಜಮೀನುಗಳಲ್ಲಿ ಕೆಲವೊಂದು ಕಟ್ಟಡಗಳನ್ನು ನಿರ್ಮಿಸಿದ್ದು, ಸದರಿ ಕಟ್ಟಡಗಳಿಗೆ ದಂಡವನ್ನು ವಿಧಿಸಿ, ಜಮೀನನ್ನು ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತಿಸಲು ಜಿಲ್ಲಾಧಿಕಾರಿಯವರನ್ನು ಕೋರಲಾಗಿದೆ
XII	ಶೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು/ಜಮೀನುಗಳನ್ನು ಕೃಷಿಯೇತರ ಉದ್ದೇಶಕ್ಕಾಗಿ ಭೂ ಪರಿವರ್ತನೆಯನ್ನು ನಿರಾಕರಿಸಲು ಸದರಿ ಜಮೀನು/ಜಮೀನುಗಳಲ್ಲಿ ಅಧಿಕ ವಿದ್ಯುತ್ ಪ್ರಸರಣ ತಂತಿಗಳಿರುವುದಿಲ್ಲ
XIII	ಶೆಡ್ಯೂಲ್‌ನಲ್ಲಿ ನಮೂದಿಸಿರುವ ಜಮೀನು/ಜಮೀನುಗಳು ಸರ್ಕಾರದ ಅಧಿಸೂಚನೆಗಳನ್ವಯ ಈ ಕೆಳಕಂಡ ವಲಯದ ವ್ಯಾಪ್ತಿಗೊಳಪಡುತ್ತದೆ
XIV	ಅಧಿಸೂಚನೆ ಸಂಖ್ಯೆ ಮತ್ತು ದಿನಾಂಕ | ವಲಯದ ಹೆಸರು

10. ಶ್ರೀ/ಶ್ರೀಮತಿ.................... ರವರ ಮಗ/ಮಗಳು ಆದ ಶ್ರೀ/ಶ್ರೀಮತಿ .... ಆದ ನಾನು ಮೇಲೆ ನೀಡಿರುವ ಮಾಹಿತಿಯು ನನ್ನ ತಿಳುವಳಿಕೆಯಂತೆ ಸತ್ಯವಾಗಿರುತ್ತದೆ. ಒಂದು ವೇಳೆ ನಾನು ನೀಡಿರುವ ಯಾವುದೇ ಮಾಹಿತಿಯು ತಪ್ಪೆಂದು ಸಾಬೀತಾದಲ್ಲಿ ನಾನು ಭಾರತೀಯ ದಂಡ ಸಂಹಿತೆಯ ಉಪಬಂಧಗಳಿಗೆ ಅನುಸಾರ ಕಾನೂನು ಕ್ರಮಗಳಿಗೆ ಹಾಗೂ ಯಾವುದೇ ಕ್ರಮಕ್ಕೆ ಹೊಣೆಗಾರನಾಗಿರುತ್ತೇನೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸ್ಥಳ:-	ಪ್ರಮಾಣೀಕರಿಸುವವರ ಸಹಿ
ದಿನಾಂಕ:-	ಪ್ರಮಾಣೀಕರಿಸುವವರ ಹೆಸರು
ಸಾಕ್ಷಿ - 1 ಸಾಕ್ಷಿ - 2	ನನ್ನ ಸಮಕ್ಷಮದಲ್ಲಿ ಪ್ರಮಾಣೀಕರಿಸಿದ್ದಾರೆ ನೋಟರಿ

FORM-A

AFFIDAVIT/DECLARATION

EXECUTED ON THIS............DAY OF ....(MONTH) ....(YEAR)

01.	Name of the executant.	
02.	Name of the Father / Mother / Husband	
03.	Age/Date of Birth	
04.	Address	
05.	Photo id (Description & Number)	

06. Purpose and details of the Affidavit:

I, Sri.............................. residing in the above address for the last .... Years do declare that, I am the owner of the agricultural land as shown in the schedule hereunder and wish to divert the land use for non-agricultural purpose i.e.(Residential/Industrial/ ....) and have applied to the Deputy Commissioner for obtaining an order for conversion of the agricultural land for non-agricultural purpose. The details are as detailed

07. Schedule Property:

District	Taluk	Hobli	Village	Survey No.	Surnoc	Hissa Number

Extent of the land				Land class	Whether
Total	Kharab(a)	Kharab(b)	Net	Dry/Wet/ Garden	Akarband & RTC enclosed?

Checkbandi	North	South	East	West	

08. I have acquired the right over the property as shown hereunder:

Mutation No.	Year	Acquisition Type

09. Declaration:

I, on the basis of the records make the following declarations

i.	There is no Government Restriction prevailing on the schedule property against alienation of the property imposed under the provisions of the Land Grant / Regularization / Confirmation/Restoration of the land.
ii	This land shown in the schedule is/are not a tenanted land under the provisions of the Karnataka Land Reforms Act, 1961 nor any case is pending before any Court of Law regarding deciding the conflict of tenancy.
iii.	This land shown in the schedule is/are not a land which attract the provisions of the Inam Abolition Act, 1959 Charitable, Endowment or any such Inams which has been vested in Government but, not re-granted.
iv	This land shown in the schedule is/are not the land either listed or subjected to any violation or suspected violation of such conditions under Section 79/A-B of the Karnataka Land Reforms Act, 1961
v.	This land shown in the schedule is/are not a land granted to the depressed class which would attract the provisions of the Karnataka (Prohibition on Transfer of Certain Lands) Act, 1978 which prohibits the transfer of ownership without the order of permission by the Government.
vi.	The land shown in the schedule is/are not pending in any court of law for declaration of the ownership or title or subjected to any Stay or Status Quo by any of the Courts including the Revenue or Civil Courts or Tribunals.

	vii	The land shown in the schedule is/are not acquired for any purpose nor any intimation is received for acquiring the schedule land
	viii	The land shown in the schedule is not forest land
	ix	The land shown in the schedule is/are not assigned to the office of any hereditary village offices which would attract the provisions of Karnataka Village Officers Abolitions Act, 1961
	x	There are no such construction/structure on the schedule property except farm house if any.
	xi	There are some construction / structure on the schedule property and requested the Deputy Commissioner to grant conversion of the land for non-agricultural purpose by levying the penalty for such un-authorised constructions
	xii	There is no such High Tension Lines drawn upon the schedule property which would cause rejection of the request for conversion of land for non-agricultural purpose
	xiii	The land shown in the schedule are falling with in the following zone as per the notification of the Government shown hereunder
	xiv	Notification Number and date / Zone for which the notification issued
10.		I, Sri/Smt..................................Son/daughter of Sri/Smt.. Do hear by swear and declare that, the information furnished by me through the declaration above are true to the best of my knowledge. If any of the information is proved wrong or concocted, I am liable for any action as per the provisions of Indian Penal Code and also any consequences as per law

Place:	Signature of the Executant:
Date:	Name of the Executant:

Witness – 1

Witness – 2

SWORN TO BEFORE ME

NOTARY: